ಅ) 76. ವಿವರ ಕೆಳಗಿನಂತಿದೆ.

	ಗ್ರಾಮದ ಹೆಸರು	ಮೀನುಗಾರರ ಸಂಖ್ಯೆ
1)	ಮಾಕುನಹಳ್ಳಿ ಬೆಸ್ತರ ಪಾಳ್ಯ	17
2)	ಮಾಕುನಳ್ಳಿ	3
3)	ಮಾಸ್ತಿಕೆರೆ	16
4)	ಕಟ್ಟಿಕೆರೆ ಹೆ.ಎಸಪಾಳ್ಯ	25
5)	ಕಟ್ಟಿಕೆರೆ	15
	ಒಟ್ಟು	76

ಆ) ಯಾವುದೂ ಇಲ್ಲ.

ಇ) ಇಲ್ಲ.

ಈ) 2002-03ನೇ ಸಾಲಿಗೆ ಚಿಕ್ಕಾಯಕನಹಳ್ಳಿ ತಾಲ್ಲೂಕಿಗೆ 10 ಮನೆಗಳನ್ನು ಮಂಜೂರುಮಾಡಲಾಗಿದೆ. ಹಾಗೂ ಮುಂಬರುವ ಸಾಲುಗಳಲ್ಲಿ, ಅನುದಾನ ಲಭ್ಯತೆಗನುಸಾರವಾಗಿ ವಸತಿ ಸೌಲಭ್ಯ ಒದಗಿಸಲಾಗುವುದು.

ಚಿಕ್ಕೋಡಿ ತಾಲ್ಲೂಕು ಕಬ್ಬೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಕಟ್ಟಡ.

1283(1227) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕೋಡಿ ತಾಲ್ಲೂಕು ಕಬ್ಬೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಕೇಂದ್ರ ಕಟ್ಟಡವನ್ನು ಉದ್ಘಾಟನೆ ಮಾಡಿದ್ದು, ಕಟ್ಟಡವನ್ನು ಸಹಾತಂರ ಮಾಡದೆ ಇರುವ ವಿಷಯವು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಸಂಬಂಧಪಟ್ಟ ಇಲಾಖೆ ಹಸ್ತಾಂತರ ಮಾಡಿ ಕೂಡಲೆ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಪಶುಸಂಗೋಪನಾ ಇಲಾಖೆಗೆ ದಿನಾಂಕ 29ನೇ ನವೆಂಬರ್ 2001ರಂದು ಹಸ್ತಾಂತರವಾಗಿದೆ.

ಆ) ಸದ್ಯದಲ್ಲಿಯೇ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.